ಏಪ್ರಿಲ್ - 1

ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ .  -ಮಾರ್ಕ 14:38

ಶೋಧನೆಗಳು ಬರುವದು ಯಾವ ರೀತಿಯಿಂದ ಎಂಬದು ಗೊತ್ತಾಗಬೇಕಾದರೆ, ಅವುಗಳ ಅನುಭವಕ್ಕೆ ನಾವು ಒಳಗಾದ ನಂತರ ಮಾತ್ರ ಅವುಗಳ ಸ್ವರೂಪ ನಮಗೆ ಸ್ಪಷ್ಟವಾಗಿ ತೋರಿಬರುತ್ತದೆ.  ಈ ಶೋಧನೆಗಳ ಬಗ್ಗೆ ನಮಗೆ ಆರಂಭದಲ್ಲಿಯೇ ತಿಳಿದಿದ್ದರೆ, ಅವು ನಮಗೆ ಲಘುವಾದ ಹಾಗೆ ಪರಿಣಮಿಸುತ್ತವೆ. ಆದ್ದರಿಂದ, ಎಚ್ಚರವಾಗಿದ್ದು, ಪ್ರಾರ್ಥನೆಯಲ್ಲಿ ನಿರತರಾಗಿರಬೇಕು.  ಅದನ್ನು ಯಾವ ಭೀತಿಯಿಲ್ಲದೆ ಎದುರಿಸಬೇಕಾದರೆ ಮೊದಲೇ ಸಿದ್ಧತೆ ಮಾಡಿಕೊಂಡಿರಬೇಕು.  ಯಾಕಂದರೆ, ವಿರೋಧಿಯಾಗಿರುವ ಸೈತಾನನು ಯಾರನ್ನು ನುಂಗಲಿ ಎಂದು ಕಾದುಕೊಂಡಿರುತ್ತಾನೆ.  ನಿಮ್ಮಲ್ಲಿರುವ ದೌರ್ಬಲ್ಯಗಳ ಅರಿವು ಅವನಿಗೆ ಇರುವದರಿಂದ ಅದರ ಪೂರ್ಣ ಪ್ರಯೋಜನ ಹೊಂದುವದಕ್ಕೆ ಸಿದ್ಧನಾಗಿರುತ್ತಾನೆ.  ಈ ಕಾರಣದಿಂದಾಗಿ ನಾವು ಪವಿತ್ರಾತ್ಮನ ಬಲದಿಂದ ಕೂಡಿದವರಾಗಿ, ಹೃದಯಗಳನ್ನು ದೃಢಪಡಿಸಿಕೊಂಡು ಕರ್ತನ ಸಮಯೋಚಿತವಾದ ಸಹಾಯವನ್ನು ಎದುರು ನೋಡಿ ಪಡೆದುಕೊಳ್ಳುವದಾದರೆ, ಇವುಗಳನ್ನು ಜಯಿಸಿ ಗೆದ್ದುಕೊಂಡವರಾಗಿ ದೇವರ ಕೃಪೆಯಲ್ಲಿ ಮುಂದುವರಿಯಬಹುದು.

ನನ್ನ ಮನವೇ ಜಾಗರೂಕತೆಯಿಂದ ಕೂಡಿರು

ಹತ್ತು ಸಹಸ್ರ ವೈರಿಗಳ ದಾಳಿಯಾಗಲಿ

ಪಾಪದ ಸಮೂಹ ನಿನ್ನ ಮೇಲೆ ದಂಡಿಳಿಸಿ ಬರಲಿ

ನಿನ್ನಿಂದ ಬಹುಮಾನ ಕಿತ್ತುಕೊಳ್ಳಲಾಗದು-Z '03, 119 (ಖ 3178).

*** *** ***

ಏಪ್ರಿಲ್ - 2

ಆದದರಿಂದ, ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ.  ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ.  -ಗಲಾತ್ಯದವರಿಗೆ 6:10

ಕ್ರೈಸ್ತನಾದವನು ಎಲ್ಲರಿಗೂ ಒಳ್ಳೇದನ್ನು ಮಾಡುವದಕ್ಕೆ ತನಗೆ ಸಮಯವಿರಲಿ, ಇಲ್ಲದಿರಲಿ, ಅನುಕೂಲವಿರಲಿ, ಅನಾನುಕೂಲವಿರಲಿ, ಸಿದ್ಧನಾಗಿರಬೇಕು.  ಇದಲ್ಲದೆ, ಸಹೋದರರಿಗಾಗಿ ಪ್ರಾಣವನ್ನೇ ಕೊಡುವಷ್ಟರಮಟ್ಟಿಗೆ ತಯಾರಿರಬೇಕು.  ಹಾಗೆ ಅನುದಿನವೂ ಈ ಪ್ರಾಣತ್ಯಾಗದ ಕರ್ತವ್ಯ ನೆರವೇರಿಸುತ್ತಿರಬೇಕು.  ಹೇಗಂದರೆ, ಸತ್ಯಪ್ರಚಾರಕ್ಕಾಗಿ ತನ್ನ ಕಾಲವನ್ನು ವ್ಯಯ ಮಾಡುತ್ತಿರಬೇಕು. ಸಹೋದರರಿಗೆ ಬೇಕಾದಲ್ಲಿ ಸಹಾಯವಾಗುವಂತೆಯೂ ನಡಕೊಳ್ಳಬೇಕು.  ಹಾಗೆ ಮಾಡುವಾಗ ದೇವರು ಕೊಟ್ಟಿರುವ ಸರ್ವಾಯುಧಗಳನ್ನು ಧÀರಿಸಿ ಈ ಕಠಿಣ ಯುದ್ಧಕಾಲದಲ್ಲಿ ಜಯಶಾಲಿಯಾಗಿ ನಿಲ್ಲಬೇಕು-Z '03, 121 (ಖ 3180).

*** *** ***

ಏಪ್ರಿಲ್ - 3

ಇರುಳು ಬಹಳ ಮಟ್ಟಿಗೆ ಕಳೆಯಿತು; ಹಗಲು ಸಮೀಪವಾಯಿತು. ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ.

-ರೋಮಾಪುರದವರಿಗೆ 13:12

ಕತ್ತಲೆಗೆ ಅನುಗುಣವಾದ ಕೃತ್ಯಗಳು ಅಂದರೆ ಅವುಗಳನ್ನು ತೀವ್ರವಾದ ತನಿಖೆಗೆ ಒಳಪಡಿಸಿದರೆ, ಯಾವದಾದರೂ ಆಗಲಿ, ಬೆಳಕಿನಲ್ಲಿ ನಿರ್ಧೋಷವಾಗಿ ಕಂಡುಬರುವದು ಅವುಗಳಿಂದ ಆಗದು. ಹೊಸಯುಗವು ಆರಂಭವಾಗಿ ಬಂದಲ್ಲಿ ಆಗಲೂ ಸಹ ಎದುರಿಸಿ ನಿಲ್ಲುವದಕ್ಕೆ ಆ ಕೃತ್ಯಗಳಿಂದಾಗದು. ಈಗ ನಾವೆಲ್ಲರೂ ಹೊಸ ಯುಗದಲ್ಲಿ ಅಧೀನರೂ, ಹಳೆ ಯುಗಕ್ಕೆ ಸೇರಿದವರಲ್ಲ ಎಂಬದನ್ನು ಮರೆಯಬಾರದು. ಆದ್ದರಿಂದ, ಬೆಳಕಿನ ರಾಜ್ಯವು ಸ್ಥಾಪನೆಯಾದ ನಂತರ ನಾವು ಆ ರಾಜ್ಯದ ನಾಗರೀಕರಾಗಿ, ಸಾರ್ವಭೌಮನಾದ ಕ್ರಿಸ್ತೇಸುವಿಗೆ ಜವಾಬ್ದಾರರಾಗಿ ವರ್ತಿಸುವದನ್ನು ಈಗಲೇ ಕಲಿಯುವವಂತರಾಗಬೇಕು. ಹೀಗೆ ಹೊಣೆಗಾರಿಕೆಯಿಂದ ನಡೆದುಕೊಳ್ಳುವಲ್ಲಿ ಕತ್ತಲೆಯ ಪ್ರಭುವಾದ ಸೈತಾನನು ಹಾಗೂ ಅವನ ಕೃತ್ಯಗಳಿಗೆ, ಮಾರ್ಗಗಳಿಗೆ ವಿರೋಧಿಗಳಾಗಿ ನಿಲ್ಲುವಂತವರಾಗುತ್ತೇವೆ-Z '03, 122 (ಖ 3181).

*** *** ***

ಏಪ್ರಿಲ್ - 4

ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ.

-ರೋಮಾಪುರ 13:13

ಪ್ರತಿಯೊಬ್ಬನು ಸಹ ತಾನು ಖರ್ಚು ಮಾಡುವ ಒಂದೊಂದು ರೂಪಾಯಿ, ಪೈಸೆಯ ವಿಷಯದಲ್ಲಿ ಪ್ರಾಮಾಣಿಕನಾಗಿ ವರ್ತಿಸುವದಲ್ಲದೆ, ತನ್ನ ನೆರೆಯವರ ಬಗ್ಗೆ ವಂಚನೆಯಿಲ್ಲದ ರೀತಿಯಲ್ಲಿ ವರ್ತಿಸುವ ಹಾಗೆ ತನ್ನನ್ನು ನೋಡಿಕೊಳ್ಳಬೇಕು. ಹಾಗೆಯೇ ತನ್ನ ಸಹೋದರರ ಬಗ್ಗೆ ನಿಷ್ಕಪಟವಾದ ರೀತಿಯಲ್ಲಿ ಭಾವಿಸಿಕೊಳ್ಳುವದಲ್ಲದೆ, ತನ್ನ ದೇವರು ಮತ್ತು ನಂಬಿಕೆಯ ವಿಷಯದಲ್ಲಿ ನ್ಯಾಯಪರವಾಗಿ ಒಪ್ಪಿಕೊಂಡು ಅರಿಕೆ ಮಾಡುವಂತೆ ಆಗಬೇಕು. ಇಂದಿನ ಕಾಲದ ಪರೀಕ್ಷೆಯನ್ನು ಮೇಲ್ಕಂಡ ರೀತಿಯಲ್ಲಿ ನಡೆಸಲಾಗುತ್ತದೆ. ಯಾರಾರು ದೇವರಿಗಿಂತ ಹೆಚ್ಚಾಗಿ ಮನುಷ್ಯರ ಮೆಚ್ಚಿಗೆಗೆ ಹೆಚ್ಚು ಒಲವು ತೋರಿ ಅಪ್ರಾಮಾಣಿಕವಾಗಿ ಇಷ್ಟಪೂರ್ವಕವಾಗಿ ಸುಳ್ಳನ್ನೇ ನಂಬಿ ತಮ್ಮ ಜೀವಿತದಲ್ಲಿ ಅದನ್ನೇ ಗುರಿಯನ್ನಾಗಿ ಸ್ವೀಕರಿಸಿರುತ್ತಾರೋ, ಅಂಥಹವರನ್ನು ಸುಳ್ಳನ್ನೇ ನಂಬಿ ಅದನ್ನೆ ಹಿಂಬಾಲಿಸಿ ಹೋಗುವ ಹಾಗೆ ಬಿಟ್ಟುಕೊಡಲಾಗುವದು. ಹಾಗೆ ಅವರು ತಮ್ಮ ನಿತ್ಯ ಹಿತಾಸಕ್ತಿಯನ್ನು ಭಂಗಪಡಿಸಿಕೊಳ್ಳುವಂತೆಯೂ ಸಹ ಅವರನ್ನು ಬಿಟ್ಟುಬಿಡಲಾಗುವದು. ಇದು ಅವರ ಜೀವಿತದಲ್ಲಿ ಬೇರೆಲ್ಲಾ ಉತ್ತಮ ಸಾಧನೆಗಳನ್ನು ಮಾಡಿಬಿಟ್ಟಿದ್ದರೂ, ಅವರ ಅಂತ್ಯ ಸ್ಥಿತಿಯು ಹೀನಾವಸ್ಥೆಯಲ್ಲಿ ಕೊನೆಗೊಳ್ಳುತ್ತದೆ-Z '03, 122 (ಖ 3181).

*** *** ***

ಏಪ್ರಿಲ್ - 5

ಮೃಷ್ಟಭೋಜನದಿಂದಲೋ ಎಂಬಂತೆ ನನ್ನ ಮನಸ್ಸು ಸಂತುಷ್ಟವಾಗಿರುವದು. ನನ್ನ ಬಾಯಿ ಉತ್ಸಾಹ ಧ್ವನಿ ಮಾಡುತ್ತಾ, ನಿನ್ನನ್ನು ಕೊಂಡಾಡುವದು. ನಾನು ಹಾಸಿಗೆಯ ಮೇಲಿದ್ದುಕೊಂಡು ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು.

-ಕೀರ್ತನೆಗಳು 63:5,6

ಪ್ರಾರ್ಥನೆ ಎಂಬುವದು ಒಂದು ಅನುಗ್ರಹವೆಂದಲ್ಲ; ಅದು ಒಂದು ಅವಶ್ಯಕತೆಯಾಗಿರುತ್ತದೆ. ಕ್ರಿಸ್ತೀಯ ಬೆಳವಣಿಗೆಯಲ್ಲಿ ಇದು ತುಂಬಾ ಅವಶ್ಯಕವಾದದ್ದು, ಎಂಬದಾಗಿ ಆಜ್ಞಾಪಿಸಲಾಗಿದೆ. ಯಾವನಾದರೂ ದೇವರಿಗೆ ಕೃತಜ್ಞತಾಪೂರ್ವಕ ಆರಾಧನೆ ಸಲ್ಲಿಸಿ ಆತನೊಂದಿಗೆ ಸಂಪರ್ಕ ಇಟ್ಟುಕೊಳ್ಳುವದರ ಅಭಿಲಾಶೆ ಹೊಂದದೆ ಇದ್ದರೆ ಅವನು ದೇವಪುತ್ರನೆಂಬ ಆತ್ಮೀಯತೆಯನ್ನು ಕಳೆದುಕೊಳ್ಳುವ ಸಾಧ್ಯತೆ ಇರುವದರಿಂದ ಇದಕ್ಕೆ ಅಡ್ಡಿಯಾಗಿ ನಿಂತಿರುವ ಪ್ರಪಂಚ, ಶರೀರಭಾವ ಮತ್ತು ಸೈತಾನ ಇವನ್ನು ನಿವಾರಣೆ ಮಾಡಿಕೊಳ್ಳುವ ಪ್ರಯತ್ನ ವಹಿಸಿಕೊಳ್ಳಬೇಕು. ಕರ್ತನು ನಮ್ಮ ಮೇಲೆ ಆತ್ಮವಿಶ್ವಾಸ ಇಟ್ಟಿರುವನು ಎಂಬ ಪುರಾವೆ ನಮ್ಮಲ್ಲಿದ್ದರೆ ಆತನ ಗುಣಲಕ್ಷಣಗಳು, ದಿವ್ಯ ಯೋಜನೆ ನಮಗೆ ಪ್ರಕಟವಾಗಿ ಆ ಮೂಲಕ ನಮ್ಮ ಆರಾಧನೆ, ಪ್ರಾರ್ಥನೆಗಳಲ್ಲಿ ಕೊರತೆ ಉಂಟಾಗದೆ, ಇನ್ನೂ ಹೆಚ್ಚಿನ ಧನ್ಯತೆ ಕೂಡಿಸಲ್ಪಡುತ್ತದೆ. ಹಾಗೆಯೇ, ನಮ್ಮ ಹೃದಯಗಳು ಫಲವತ್ತಾದ ಭೂಮಿಯಂತೆ ಆಗಿ ಹೇರಳವಾದ ಬೆಳೆ ಉಂಟಾಗುವಂತೆ ಮಾಡುತ್ತದೆ-Z ’96, 161 (ಖ 2004).

*** *** ***

ಏಪ್ರಿಲ್ - 6

ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ. -1ಪೇತ್ರ 4:16

ನಾವು ಸತ್ಯತೆಯ ಗುರಿಯಲ್ಲಿ ಸೇವಾನಿರತರಾಗಿ ಅದಕ್ಕಾಗಿ ನಮ್ಮ ಶಕ್ತಿ ವ್ಯಯ ಮಾಡುವಾಗ ರೋಗ ರುಜಿನ, ಅನಾನುಕೂಲಗಳು ಸಹಜವಾಗಿ ಸಂಭವಿಸುತ್ತವೆ. ಇದರ ಹಿಂದೆ ದೇವರು ತಾನೇ ಈ ಅಸೌಕರ್ಯಗಳಿಗೆ ಅನುಮೋದನೆ ನೀಡುವದರಿಂದ ನಮ್ಮಲ್ಲಿ ದೇವರ ಬಗ್ಗೆ ನಂಬಿಕೆ ಪ್ರೀತಿ ಇರುವದೆಂದು ಈ ಮೂಲಕ ಸಾಬೀತಾಗುತ್ತದೆ. ಯಾಕಂದರೆ, ಇಂಥ ಸಂಕಟಗಳಿಗೆ ನಾವು ಒಳಗಾಗದೆ ಇದ್ದರೆ ಹಾಗೂ ಪವಾಡ ಸದೃಶದಿಂದ ಇವುಗಳು ತಕ್ಷಣ ನಿವಾರಣೆ ಆಗುವದಾದರೆ, ದೇವರ ಸೇವೆಯಲ್ಲಿ ನಮ್ಮಿಂದ ಯಾವ ಬಲಿದಾನವಾಗಲಿ, ಸತ್ಯದ ಪರವಾಗಿ ಚಿತ್ತಪೂರ್ವಕವಾಗಿ ಶೋಧನೆಗಳನ್ನು ಅನುಭವಿಸುವದು ಇಲ್ಲವಾಗಿ ಹೋಗುತ್ತವೆ. ಅಂದರೆ ಸತ್ಯಕ್ಕಾಗಿ ನಾವು ಯಾವ ಕಷ್ಟವಾಗಲಿ ಹಿಂಸೆಯಾಗಲಿ ಸಹಿಸುವಂಥ ನಿದರ್ಶನಗಳೇ ಇರುವದಿಲ್ಲ. ಇದಲ್ಲದೆ, ನಾವು ಸತ್ಯಕ್ಕೋಸ್ಕರ ಒಂದು ನೋವಾಗಲಿ, ಗಾಯವಾಗಲಿ, ತೊಂದರೆಯಾಗಲಿ, ಬಾಧೆಯಾಗಲಿ ಅಥವಾ ಶಿರಚ್ಛೇದನವನ್ನೇ ಅನುಭವಿಸುವದಾದರೆ ಅದು ಪವಿತ್ರಾತ್ಮನ ಸಾಕ್ಷಿಯಾಗಿ ಪರಿಣಮಿಸಿ, ನಾವು ನಂಬಿಗಸ್ತಪೂರ್ಣರು ಎಂಬದನ್ನು ರುಜುವಾತುಪಡಿಸುತ್ತದೆ. ಈ ಎಲ್ಲಾ ಬಾಧೆಗಳನ್ನು ನಾವು ಅನುಭವಿಸುವಾಗ ಅವುಗಳಲ್ಲಿ ಸಂತೋಷಿಸಬೇಕು. ಯಾಕಂದರೆ, ಇದನ್ನೇ ನಮ್ಮ ಕರ್ತನೂ ಮತ್ತು ಅಪೋಸ್ತಲನಾದ ಪೇತ್ರನೂ ಹೇಳಿರುವದು-Z ’96, 166 (ಖ 2004).

*** *** ***

ಏಪ್ರಿಲ್ - 7

ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು. -ಫಿಲಿಪ್ಪಿಯವರಿಗೆ 4:19

ಮಹಾ ಸಂತೋಷದ ಶುಭ ಸಮಾಚಾರವನ್ನು ಸಾರುವದಕ್ಕೆ ಉರಿಯುತ್ತಿರುವ ಉತ್ಸಾಹ ನಿನ್ನಲ್ಲಿ ಇಲ್ಲದಿದ್ದರೆ ಅದಕ್ಕಾಗಿ ಒಳ್ಳೇ ವ್ಯವಸ್ಥಿತ, ನಂಬಿಕೆ, ವಿಶ್ವಾಸ ಮತ್ತು ಛಲ ಇವುಗಳಿಂದ ದೇವರಿಗೆ ವಿಜ್ಞಾಪಿಸಿಕೊಳ್ಳುವದಾದರೆ, ಅತಿ ಶೀಘ್ರದಲ್ಲಿ ಆ ತೆರನಾದ ರೀತಿಯಲ್ಲಿ ನೀನೂ ಸುವಾರ್ತೆ ಸಾರಬಹುದು. ನಿನ್ನಲ್ಲಿ ಸುವಾರ್ತೆಯ ವಿಷಯದಲ್ಲಿ ಹೆಚ್ಚಿನ ಆಸಕ್ತಿ ಮತ್ತು ಪ್ರೀತಿಯಿದ್ದು ಅದನ್ನು ಮನಮುಟ್ಟುವಂತೆ ಸಾರಿ ಹೇಳುವದಕ್ಕೆ ಸಾಮರ್ಥ್ಯದ ಕೊರತೆ ಇದ್ದರೆ, ಹಾಗೆ ಸಾರಿ ಹೇಳುವ ಜಾಣತನಕ್ಕಾಗಿ ದೇವರಲ್ಲಿ ವಿಜ್ಞಾಪಿಸಿಕೊಂಡು ನಿನ್ನಲ್ಲಿರುವ ಅಂಥಹ ಸಾಮರ್ಥ್ಯದ ಪೂರ್ಣಪ್ರಮಾಣವನ್ನು ಉಪಯೋಗಿಸಿಕೊಳ್ಳಬೇಕು. ಇದೇ ರೀತಿಯಲ್ಲಿ ನಿನ್ನಲ್ಲಿ ಹೆಚ್ಚು ಉತ್ಸಾಹ ಹಾಗೂ ಜಾಣತನದ ವಿದ್ಯೆ ಇದ್ದರೂ ಅವಕಾಶಗಳ ಕೊರತೆ ಇದ್ದರೆ, ದೇವರ ಬಳಿಗೆ ಇವುಗಳನ್ನು ಕೊಂಡೊಯ್ದು, ನನಗೆ ಈಗ ಇರುವ ಸದವಕಾಶಗಳ ಸದ್ವಿನಿಯೋಗ ಮಾಡಿಕೊಳ್ಳುತ್ತಿದ್ದೇನೆ ಎಂದು ತಿಳಿಯಪಡಿಸಿ ಮುಂದೆ ಬರುವಂಥ ಅವಕಾಶಗಳಿಗಾಗಿ ಕಾದುಕೊಳ್ಳಬೇಕು. ಆದಾಗ್ಯೂ ನೀನು ಈ ಸುವಾರ್ತೆ ಸಾರುವ ಬಗ್ಗೆ ನಿನ್ನಲ್ಲಿ ಕನಿಷ್ಠವಾದ, ಅಲ್ಪ ಸ್ವಲ್ಪ ಬುದ್ಧಿವಂತಿಕೆ ಇದ್ದರೆ, ಅಷ್ಟೇ ರೀತಿಯಿಂದ ಕೈಕಾರ್ಯ ನಡಿಸಿಕೊಂಡು ಮುಂದೆ ಬಂದು ಒದಗುವ ಸಮಯಗಳಿಗಾಗಿ ಹಾತೊರೆಯತಕ್ಕದ್ದು-Z ’96, 163 (ಖ 2004).

*** *** ***

ಏಪ್ರಿಲ್ - 8

ಅವನು ಹಿಂದೆಗೆದರೆ, ಅವನಲ್ಲಿ ನನಗೆ ಸಂತೋಷವಿರುವದಿಲ್ಲ. -ಇಬ್ರಿಯ 10:38

ಹಿಂದಕ್ಕೆ ಸರಿಯುವದು, ಮೊದ ಮೊದಲು ಬಲಿದಾನದ ಇಕ್ಕಟ್ಟಾದ ಮಾರ್ಗಬಿಟ್ಟು ಬೇರೆ ದಾರಿ ಹಿಡಿಯುವದು. ಅಂದರೆ ಹಿಂದೆ ತಿರಿಗಿ ನೋಡುವದು ಅಥವಾ ತಾನು ಹಿಂದೆ ಬೇಡವೆಂದು ಬಿಟ್ಟು ಹೋದ ವಸ್ತುಗಳಿಗಾಗಿ ಪರಿತಪಿಸುವದು ಎಂಬರ್ಥ ಬರುತ್ತದೆ. ಓಟದ ಪಂದ್ಯದಲ್ಲಿ ವೇಗ ತುಸು ಕಡಿಮೆ ಮಾಡುವದು ಪೂರ್ವಸ್ವಭಾವದ್ದು. ದುರಿಚ್ಛೆಗಳಿಗಾಗಿ ಸತ್ಯವನ್ನು ಬಲಿಕೊಡುವದು, ಇದೂ ಸಹ ಹಿಂದೆಗೆಯುವದು ಎಂಬದಾಗಿ ಅರ್ಥ ಕೊಡುತ್ತದೆ. ಹೀಗೆ ಮಾಡುವದರಿಂದ, ಶೋಧಕನ ನಿಪುಣತೆಗೆ ದಾರಿ ಮಾಡಿಕೊಟ್ಟ ಹಾಗೆ ಪರಿಣಮಿಸಿ ನಮ್ಮ ದೌರ್ಬಲ್ಯಗಳ ಸುಳಿವು ಅವನಿಗೆ ಲಭಿಸಿ ತನಗೆ ಅನುಕೂಲಕರವಾದ ರೀತಿಗಳಿಂದ ಅವುಗಳ ಪೂರ್ಣ ಪ್ರಯೋಜನ ಹೊಂದುವದಕ್ಕೆ ಸಾಧ್ಯವಾಗುತ್ತದೆ. ನ್ಯಾಯವಿಚಾರಣೆಗೆ ಪ್ರತಿಕೂಲವಾಗುವಂಥ ಸೂಕ್ಷ್ಮವಾದ ತಪ್ಪು ಅಭಿಪ್ರಾಯಗಳನ್ನು ನಮ್ಮ ಮನಸ್ಸಿಗೆ ತೋರುವಂತೆ ಮಾಡಲಾಗುವದು. ಕಣ್ಣಿಗೆ ರಾಚುವಂಥ ಆಮಿಷಗಳು ನೀತಿಯ ತೋರಿಕೆಗೆ ಅನುಗುಣವಾದ ರೀತಿಯಿಂದ ನಮ್ಮ ಮಾಂಸಿಕ ಶರೀರ ಭಾವನೆಗಳಿಗೆ ಒಪ್ಪುವ ಹಾಗೆ ಹಾಜರುಪಡಿಸಲಾಗುವದು. ಇದಲ್ಲದೆ, ಗ್ರಹಿಸಲಾಗದ ರೀತಿಯಲ್ಲಿ ನಾವು ಕರ್ತನಲ್ಲಿ ಪ್ರಪ್ರಥಮವಾಗಿ ಇಟ್ಟಂಥ ಪ್ರೀತಿಯು ಮರೆಯಾಗಿ ಹೋಗುತ್ತದೆ. ಹಾಗೆ ದೇವರ ಸೇವೆಯಲ್ಲಿ ಮೊದಲು ತೋರಿಸಿದ ಆಸಕ್ತಿ ಕುಂದಿ ಹೋಗುತ್ತದೆ. ಕಟ್ಟಕಡೆಗೆ ಸತ್ಯವಾಕ್ಯ ದೇವರಾತ್ಮ

ಇವುಗಳಿಂದ ದೂರ ಸರಿದುಹೋಗಿ ದೇವರಾತ್ಮನ ಮಾರ್ಗದರ್ಶನ ಸಂಪೂರ್ಣವಾಗಿ ತಪ್ಪಿಹೋಗುತ್ತದೆ-Z ’95, 93 (ಖ 1798).

*** *** ***

ಏಪ್ರಿಲ್ - 9

ರಂಗಸ್ಥಾನದಲ್ಲಿ ಓಡುವದಕ್ಕೆ ಗೊತ್ತಾದವರೆಲ್ಲರೂ ಓಡುತ್ತಾರಾದರೂ ಒಬ್ಬನು ಮಾತ್ರ ಬಿರುದನ್ನು ಹೊಂದುತ್ತಾನೆ ಎಂಬದು ನಿಮಗೆ ತಿಳಿಯದೋ, ಅವರಂತೆ ನೀವೂ ಬಿರುದನ್ನು ಪಡಕೊಳ್ಳಬೇಕೆಂತಲೇ ಓಡಿರಿ. -1ಕೊರಿಂಥ 9:24

ಯುದ್ಧದಲ್ಲಿ ಜಯಪಡೆಯಬೇಕಾದರೆ, ನಾವು ದೇವರು ದಯಪಾಲಿಸಿದ ಸರ್ವಾಯುಧಗಳನ್ನು ಧರಿಸಿಕೊಳ್ಳುವದಲ್ಲದೆ, ಶೂರರಾಗಿ ಕದನದಲ್ಲಿ ಆಕ್ರಮಣಶೀಲರಾಗಿ, ಕಣ್ಣಿನಾಶೆ, ಶರೀರದಾಶೆ, ಬದುಕು ಬಾಳಿನ ಡಂಭ ಹಾಗೂ ನೀತಿ ಮತ್ತು ಪರಿಶುದ್ಧತೆಯ ವಿರೋಧವಾಗಿರುವವುಗಳ ಮೇಲೆ ಹೋರಾಡುವವರಾಗಬೇಕು. ಪ್ರೀತಿ ಅಂದರೆ, ಕರ್ತನಲ್ಲಿ, ಸತ್ಯದ ಮೇಲೆ, ನೀತಿಯ ಪರವಾಗಿ ವಿಶ್ವಾಸವಿಡಬೇಕು. ಇವುಗಳೇ ನಮ್ಮನ್ನು ಹುರಿದುಂಬಿಸುವವು. ಹಾಗೆ ಇವುಗಳಿಂದ ನಾವು ಸ್ಫೂರ್ತಿಪಡೆಯದೇ ಇದ್ದಲ್ಲಿ, ನಾವು ವಿಜಯಿಗಳಾಗುವದೇ ಅಸಾಧ್ಯವಾಗುತ್ತದೆ. ಪ್ರೀತಿಯೊಂದರಿಂದಲೇ ನಾವು ಮರಣದ ಪರ್ಯಂತರ ನಂಬಿಗಸ್ತರಾಗಿ ಉಳಿಯಬಲ್ಲೆವು ಮತ್ತು ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುತ್ತೇವೆ. ಎಲ್ಲ ಉತ್ಸಾಹವುಳ್ಳ ಪ್ರೀತಿ, ಹೃದಯಗಳಲ್ಲಿ ದೊರೆತನ ಮಾಡುವದೇ ಆದರೆ, ಅಂಥಹವರು ತಮ್ಮ ಹೃದಯಗಳನ್ನು ಪೂರ್ಣವಾಗಿ ಕರ್ತನಿಗೆ ಒಪ್ಪಿಸಿಕೊಟ್ಟು ಅಂದರೆ, ಹತ್ತನೇ ಒಂಭತ್ತು ಭಾಗದಷ್ಟು ಗೆಲುವು ಸಾಧಿಸಿರುತ್ತಾರೆ. ಇಷ್ಟೆಲ್ಲಾ ಆದರೂ ಸಹ ನಾವು ನಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಬೇಕು. (ಯೂದ 21) ಅಪೋಸ್ತಲನು ಹೇಳುವ ಹಾಗೆ ನಾವು ಎಚ್ಚರವಾಗಿದ್ದು ಆಗ್ರಹಪೂರ್ವಕವಾದ ಪ್ರಾರ್ಥನೆಯಲ್ಲಿ ನಿರತರಾಗಿರಬೇಕು-Z ’95, 93 (ಖ 1798)

*** *** ***

ಏಪ್ರಿಲ್ - 10

ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು. -1ಪೇತ್ರ 5:6

ಧೀನ ಭಾವದ ಮಾರ್ಗದಲ್ಲಿ ಹೆಜ್ಜೆ ಇಟ್ಟು ನಡೆಯುವದು ಅಷ್ಟು ಸುಲಭವಾಗಿರದೆ, ನಮ್ಮಲ್ಲಿರುವ ಆಶೆ ಆಕಾಂಕ್ಷೆಗಳನ್ನು ಹತ್ತಿಕ್ಕಿ, ಅವುಗಳನ್ನು ಯಜ್ಞವೇದಿಯ ಮೇಲೆ, ಬಲಿಪಶುವಿನ ದಹಿಸುವಿಕೆ ಪೂರ್ತಿಯಾಗುವವರೆಗೂ ಕಾದುಕೊಳ್ಳಬೇಕಾಗುತ್ತದೆ. ಹೀಗಾದರೆ ಕ್ರೈಸ್ತರಾಗಿ ನಾವು ನಮ್ಮ ರಕ್ಷಣೆಯನ್ನು

ಮನೋಭೀತಿಯಿಂದಲೂ ನಡುಗುವವರಾಗಿಯೂ ಸಾಧಿಸಿಕೊಳ್ಳಬಹುದು. ನಾವು ಹಾಗೆ ನಡೆದುಕೊಳ್ಳದೆ ಹೋದಲ್ಲಿ ದೇವರು ನಂಬಿಗಸ್ತರಿಗಾಗಿ ಜಯಹೊಂದುವವರಿಗೆ ವಾಗ್ದಾನ ಮಾಡಿದ ಬಹುಮಾನವನ್ನು ಪಡೆಯುವದು ತುಂಬಾ ಕಷ್ಟವಾಗುತ್ತದೆ. ಯಾಕಂದರೆ, ನಮಗಾಗಿ ಮುಂದೆ ಹೋದ ಮುನ್ಸೂಚಕನೂ, ಸಾತ್ವಿಕನೂ, ಧೀನತೆಯುಳ್ಳವನೂ ಆಗಿದ್ದನು. ನಾವು ಧೀನತೆಯುಳ್ಳವರೂ, ನಂಬಿಗಸ್ತರೂ ಆಗಿದ್ದರೆ ಮಾತ್ರ ದೇವರು ನಮ್ಮನ್ನು ದೇವಾಲಯದ ಪವಿತ್ರ ಪಾತ್ರೆಗಳನ್ನಾಗಿ ಮಾಡಿಕೊಂಡು ಆತನ ಹೆಸರನ್ನು ಇತರರಿಗೆ ಸಾರುವಂತೆ ಅನುಗ್ರಹಿಸುತ್ತಾನೆ. ನಮ್ಮಿಂದ ನಾನು ಎಂಬದನ್ನು ವಿಸರ್ಜಿಸಿದರೆ ದೇವರು ನಮ್ಮಲ್ಲಿ ತನ್ನ ಆತ್ಮ ಮತ್ತು ಸತ್ಯ ಇವುಗಳಿಂದ ತುಂಬಿಸಿ, ಕರ್ತನ ಸೈನಿಕರಾಗಿ ಆತನ ಶಕ್ತಿಯನ್ನು ಆಶ್ರಯಿಸಿಕೊಂಡವರಾಗಿ, ಕ್ರಿಸ್ತನ ಶಿಲುಬೆಯ ಭಟರಾಗಿ ಶೂರತನದ ಸೇವೆ ಸಲ್ಲಿಸುವವರಾಗುತ್ತೇವೆ-Z '93, 7 (ಖ 1486).

*** *** ***

ಏಪ್ರಿಲ್ - 11

ದುಂದೌತಣ ಕುಡುಕತನಗಳಲ್ಲಿಯಾಗಲಿ .......... ಕಾಲಕಳೆಯದೆ ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ. -ರೋಮಾಪುರದವರಿಗೆ 13:13

ಕೆಲವರಿಗೆ ಹಣ ಹಾಗೂ ಐಶ್ವರ್ಯದ ಮೇಲೆ ಮತ್ತಿನ ಅಮಲು ಇರುತ್ತದೆ. ಇನ್ನಿತರರಿಗೆ ಕೇವಲ ವ್ಯವಹಾರ, ವ್ಯಾಪಾರ ವಹಿವಾಟುಗಳ ವಿಷಯದಲ್ಲಿ ಆಸಕ್ತಿ ಇರುತ್ತದೆ. ಕೆಲವರಿಗೆ ಧರಿಸುವ ಉಡುಪು, ಕೆಲವರಿಗೆ ಸಂಗೀತ, ಕೆಲವರಿಗೆ ಕಲೆಗಳ ಮುಂತಾದವುಗಳ ಮೇಲೆ ಹೆಚ್ಚಿನ ಆಸಕ್ತಿ ಇರುತ್ತದೆ. ಆದರೆ, ಈಗ ಒಂದು ನೂತನ ದಿನ ಉದಯವಾಗಿರುವದರಿಂದ, ದೇವಜನರಿಗೆ ಇದರ ಆರಂಭ ಉಂಟಾದ ಸುಳಿವು ಕಂಡು ಬಂದಿರುತ್ತದೆ, ಈ ದಿನಕ್ಕೆ ದೇವರು ನೇಮಕವಾದ ಒಂದು ಮಹಾಕಾರ್ಯವನ್ನು ಪೂರೈಸಿರುತ್ತಾನೆ. ಈ ಕಾರಣದಿಂದಾಗಿ ಅವರು ಹೆಚ್ಚಿನ ಆಸಕ್ತಿವಹಿಸಿ ಈ ಕೆಲಸದಲ್ಲಿ ತಲ್ಲೀನರಾಗಬೇಕು. ಯಾಕಂದರೆ, ಲೋಕದವರು ಇಡೀ ರಾತ್ರಿಯಲ್ಲೆಲ್ಲಾ ನಿದ್ರೆಯಲ್ಲಿ ಕಾಲ ಕಳೆದು, ದೇವರ ಕಾರ್ಯಗಳ ಕುರಿತು ಯೋಚಿಸಿ ಹಾಗೆ ಎಚ್ಚರದಿಂದ ಇರುವದಕ್ಕೆ ಆಗುತ್ತಿಲ್ಲ. ಇದಲ್ಲದೆ, ನಾವು ಭವಿಷ್ಯದ ಬಗ್ಗೆ ಚಿಂತನೆ ಇಟ್ಟುಕೊಂಡಿರುವ ಹಾಗೆ ಅವರಿಗೆ ಭವಿಷ್ಯದ ಬಗ್ಗೆ ಯಾವ ಚಿಂತನೆ ಇರುವದಿಲ್ಲ. ಆದ್ದರಿಂದ, ನಾವು ಲೋಕದವರ ಮಟ್ಟಿಗೆ, ನಮ್ಮ ಒಂದು ಯೋಚನೆ ಹಾಗೂ ನಡತೆಗಳಿಂದ ದೂರ ಉಳಿಯುವದೇ ಲೇಸು-Z '03, 123 (ಖ 3179).

*** *** ***

ಏಪ್ರಿಲ್ - 12

"ನಾವು ದೇವಸ್ತೋತ್ರ ಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತದಲ್ಲವೇ. ರೊಟ್ಟಿಯು

ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ." -1ಕೊರಿಂಥ 10:16,17

ಅನೇಕ ದ್ರಾಕ್ಷಿಗಳನ್ನು ಹಿಂಡಿ ರಸತೆಗೆದಿರುವದು ಒಂದೇ ಪಾತ್ರೆಯಿಂದ ಸೂಚಿತವಾಗಿದೆ. ಅದೇ ರೀತಿಯಾಗಿ ಅನೇಕ ಕಾಳುಗಳನ್ನು ನುಣ್ಣಗೆ ಮಾಡಿದರೆ, ಒಂದೇ ಒಂದು ರೊಟ್ಟಿಯಾಗುತ್ತದೆ. ಈ ಕಾಳುಗಳು ಇತರರು ತಿನ್ನುವದಕ್ಕೋಸ್ಕರ ರೊಟ್ಟಿಯಾಗಿ ಮಾರ್ಪಾಟು ಆಗುವದರಿಂದ ಅದರಲ್ಲಿರುವ ಒಂದೊಂದೇ ಕಾಳು ತಮ್ಮ ವೈಯಕ್ತಿಕ ಗಾತ್ರವನ್ನು ಉಳಿಸಿಕೊಳ್ಳಲಾಗದ; ಹಾಗೆಯೇ ದ್ರಾಕ್ಷಿ ಹಣ್ಣುಗಳು ಅದೇ ದ್ರಾಕ್ಷಾರಸವಾದಾಗ, ಇದೇ ಹಣ್ಣುಗಳು ತಮ್ಮ ವೈಯಕ್ತಿಕ ಗಾತ್ರವನ್ನು ಉಳಿಸಿಕೊಳ್ಳುವಂತಿಲ್ಲ. ಯಾಕಂದರೆ, ಈ ದ್ರಾಕ್ಷಾರಸವು ಜೀವಕೊಡುವ ಆತ್ಮವಾಗಿ ಸ್ಥಾಪಿಸಲ್ಪಡುತ್ತದೆ. ಈ ಕಾರಣಗಳಿಂದಾಗಿ, ಅಪೋಸ್ತಲನ ಹೇಳಿಕೆಯಲ್ಲಿ ಒಂದು ಸುಂದರವಾದ ಅಲಂಕಾರಿಕ ಹೋಲಿಕೆ ಕಾಣಬಹುದು. ಹೇಗಂದರೆ, ಕರ್ತನ ಜನರು ಒಂದೇ ರೊಟ್ಟಿ, ಒಂದೇ ಪಾತ್ರೆಯಲ್ಲಿ ಭಾಗಿಗಳಾಗುತ್ತಾರೆ. ನಾವು ಪರಲೋಕದ ಮಹಿಮೆ ಹೊಂದಿಕೊಳ್ಳುವದಕ್ಕೆ ಇರುವದು ಇದು ಒಂದೇ ಮಾರ್ಗ. ಆದಕಾರಣ, ಕರ್ತನು ನಮ್ಮನ್ನು ಕರೆದ ಮೇರೆಗೆ ಆತನ ಪಾತ್ರೆಯಲ್ಲಿ ಪಾನ ಮಾಡೋಣ. ಹಾಗೆ ಆತನ ಅನುಯಾಯಿಗಳಾದ ನಾವೂ ಸಹ ಮುರಿಯಲ್ಪಟ್ಟು ಒಂದೇ ರೊಟ್ಟಿಯಾಗಿ ಉಳಿದುಕೊಳ್ಳೋಣ. ಹೀಗೆ ಮಾಡುವದರಿಂದ ನಾವು ಆತನ ಮರಣವೆಂಬ ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಟ್ಟು ಪುನರುತ್ಥಾನದಲ್ಲಿ ಆತನೊಂದಿಗೆ ಪ್ರಭಾವ, ಮಾನ, ಅಮರತ್ವವನ್ನು ಹಂಚಿಕೊಳ್ಳೋಣ-Z '01, 76 (ಖ 2771).

*** *** ***

ಏಪ್ರಿಲ್ - 13

ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ. -ಯೋಹಾನ 6:53

ಪ್ರಿಯ ಕರ್ತನೇ, ನಮ್ಮನ್ನು ನೀತಿವಂತರೆಂಬ ನಿರ್ಣಯಕ್ಕಾಗಿ ನಿನ್ನ ಶುದ್ಧವಾದ ಮಾನವ ಜೀವವನ್ನು ಯಜ್ಞವಾಗಿ ಅರ್ಪಿಸಿದ ಕಾರಣದಿಂದ ನಿನ್ನ ಪುಣ್ಯದ ಮೌಲ್ಯವನ್ನು ನಾವು ಸಂತೋಷದಿಂದ ನಮ್ಮ ಅವಶ್ಯಕತೆಗಳಿಗೆ ಅನುಸಾರವಾಗಿ ತಿನ್ನುತ್ತೇವೆ. ಹಾಗೆಯೇ, ನಿನ್ನ ಬಾಧೆಗಳೆಂಬ ಪಾತ್ರೆಯಲ್ಲಿ ಉಲ್ಲಾಸದಿಂದ ಕುಡಿದು ಅಂದರೆ, ಸಾಂಕೇತಿಕ ರಕ್ತವನ್ನು ಪಾನ ಮಾಡುತ್ತೇವೆ. ಕರ್ತನೇ, ನಿನ್ನೊಂದಿಗೆ ಬಾಧೆ ಪಡುವದು ಒಂದು ಅನುಗ್ರಹವೆಂದು ಮನಗಾಣುತ್ತೇವೆ. ಯಾಕಂದರೆ, ತಕ್ಕಕಾಲದಲ್ಲಿ ನಾವು ನಿನ್ನೊಂದಿಗೆ ರಾಜ್ಯಭಾರ ಮಾಡಬಹುದು. ಹೀಗೆ ನಾವು ಆತನ ಮರಣದಲ್ಲಿಯೂ ಸೇರಿದವರಾಗಿದ್ದರೆ ಮುಂದಿನ ಶಾಶ್ವತ ಭವಿಷ್ಯದಲ್ಲಿ ನಾವು ಜೀವದಿಂದೆದ್ದು, ಆತನ ಸ್ವರೂಪದಲ್ಲಿಯೇ ಇದ್ದುಕೊಂಡು ಆತನ ಮದಲಗಿತ್ತಿಯಾಗಿ ಆತನ ಮಹಿಮೆ ಪ್ರೀತಿಯಲ್ಲಿ ಭಾಗಿಗಳಾಗುತ್ತೇವೆ. ಸಂಕೇತದ ಕಾರ್ಯಕ್ರಮಗÀಳನ್ನು ನೆರವೇರಿಸುವಲ್ಲಿ ನಾವು ನಂಬಿಗಸ್ತರಾಗುವದಲ್ಲದೆ, ವಾಸ್ತವಿಕತೆಯಲ್ಲಿಯೂ ಹಾಗೆ ಇರುವದು ಎಷ್ಟೋ ಚೆನ್ನಾಗಿರುವದು. "ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿರಿ; ನನಗಾಗುವ ಸ್ನಾನವು ನಿಮಗಾಗುವದು " ಎಂಬದಾಗಿ ಕರ್ತನೇ, ನೀನು ನುಡಿದ ಮಾತನ್ನು ಈಗ ಕೇಳಿರುತ್ತೇವೆ. ಕರ್ತನೇ ನಮಗೆ ಯಜ್ಞದ ಬಲಿ ಅರ್ಪಿಸಲಿಕ್ಕೆ ಬಲಸಾಲದು. ಆದರೆ ನಮಗೆ ನಿನ್ನ ಕೃಪೆಯೇ ಸಾಕು. ನಾವು ಎಂದೆಂದಿಗೂ ನಿನ್ನವರೇ-Z '99, 51 (ಖ 2436).

*** *** ***

ಏಪ್ರಿಲ್ - 14

ತನ್ನ ಪ್ರಾಣವನ್ನು ಧಾರೆಯೆರೆದು ಮರಣ ಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನಲ್ಲಾ.

-ಯೆಶಾಯ 53:12

ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಜ್ಜೆಯ ಜಾಡನ್ನು ಹಿಡಿದು ಯಾರ್ಯಾರು ಅನುಸರಿಸಿಕೊಂಡು ನಡೆಯುತ್ತಾರೋ ಅವರು ಗೆತ್ಸೆಮನೆಯ ಅನುಭವವನ್ನು ಹೊಂದಿಕೊಳ್ಳುವದು ಅನಿವಾರ್ಯವೆನಿಸುತ್ತದೆ. ಯಾಕಂದರೆ, ಪ್ರತಿಯೊಬ್ಬನು ಸಹ ತನ್ನ ಕರ್ತನ ಹೃತ್ಪೂರ್ವಕವಾದ ಅನುಭವಗಳ ಸವಿ ಮಾಡಬೇಕಾಗುತ್ತದೆ. ಅದರಿಂದ ನಾವು ಅವುಗಳನ್ನು ಮರೆಯದೆ ಸಹೋದರರ ಸೇವೆ ಮಾಡುವದಕ್ಕೆ ಒದಗಿ ಬರುವ ಅವಕಾಶಗಳಿಗಾಗಿ ಎದುರು ನೋಡಬೇಕಾಗುತ್ತದೆ.  ಇದಲ್ಲದೆ, ಯಜ್ಞದ ಕುರಿಯಾದಾತನನ್ನ ಅನುಸರಿಸುವ ಶಿಷ್ಯರಿಗೆ ನಿಂದನೆಗಳು ಉಂಟಾಗುವಲ್ಲಿ ನಾವು ಎಚ್ಚರವಹಿಸಿ ಜಾಗ್ರÀತರಾಗಿರಬೇಕು. ಯಜ್ಞದ ಕುರಿಯಾದಾತನಿಗೆ ತಮ್ಮ ಜೀವವನ್ನೇ ಅರ್ಪಿಸಿ ಆತನಿಗಾಗಿ ಬಾಧೆಪಡುತ್ತಿರುವಂತವರಿಗೆ ನಾವು ಸಾಂತ್ವನದ ಮಾತುಗಳನ್ನು ಹೇಳಿ ಸಮಾಧಾನಪಡಿಸಬೇಕು.  ಇದರಿಂದ ಅವರು ಕ್ರಮಿಸುವ ದಾರಿಯಲ್ಲಿ ಶಿಲುಬೆಯನ್ನು ಹೊತ್ತುಕೊಂಡು ಹೋಗುವಾಗ ಸಂಭವಿಸುವ ಕಷ್ಟಗಳು, ಶೋಧನೆಗಳನ್ನು ಸಹಿಸಿಕೊಳ್ಳುವಂತೆ ವರ್ತಿಸಬೇಕು.  ಹೀಗೆ ಮಾಡುವದರಿಂದ ನಮಗೆ ಶಿರಸ್ಸು, ಕರ್ತನೂ ಆಗಿರುವ ಯೇಸು ಕ್ರಿಸ್ತನು ಸಹ ತನ್ನ ಶಿಲುಬೆಯನ್ನು ಹೊತ್ತುಕೊಂಡು ಕಲ್ವಾರಿಗುಡ್ಡದ ಕಡೆಗೆ ಪಯಣಿಸುವ ಸಂದರ್ಭದಲ್ಲಿ ಆತನಿಗೆ ನಾವು ಸಹಾಯ ಮಾಡುವಂತ ಅವಕಾಶ ದೊರೆತು ದೇವರಿಗೆ ಸ್ತೋತ್ರ ಸಲ್ಲಿಸುವಂತಾಗಬೇಕು-Z '99, 125 (2473).

***    ***    ***

ಏಪ್ರಿಲ್ - 15

"ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ."   -ಲೂಕ 23:46

ನಮ್ಮ ಪ್ರಿಯ ರಕ್ಷಕನು ತಂದೆಯ ಮೇಲಣ ಪೂರ್ಣ ಭÀರವಸೆ ಹಾಗೂ ವಿಶ್ವಾಸದಿಂದ ತನ್ನ ಜೀವನದ ನಿರೀಕ್ಷೆ, ಭವಿಷ್ಯದ ಎಲ್ಲಾ ಚಿಂತನೆಗಳನ್ನು ತನ್ನ ತಂದೆಯ ಪ್ರೀತಿ ಮತ್ತು ಶಕ್ತಿಗಳಿಗೆ ಅನ್ವಯವಾಗುವಂತೆ ಒಪ್ಪಿಸಿಕೊಡುತ್ತಿದ್ದೇನೆ ಎಂಬದಾಗಿ ಘೋಷಣೆ ಮಾಡಿದ್ದನ್ನು ಇಲ್ಲಿ ಕಾಣಬಹುದು. ಇದಲ್ಲದೆ, ಈ ತೆರನಾದ ಭಕ್ತಿಪೂರ್ವಕ ಸಂಯೋಜನೆ ತನ್ನ ತಂದೆಯ ಯೋಜನೆ ವಾಕ್ಯಗಳಿಗೆ ಹೊಂದಾಣಿಕೆಯಾಗಿರುತ್ತದೆ.  ಇದೇ ರೀತಿಯಲ್ಲಿ ಯೇಸುಕ್ರಿಸ್ತನ ಶಿಷ್ಯರಾದ ನಾವೂ ಸಹ ಆತನ ಹೆಜ್ಜೆ ಜಾಡಿನಲ್ಲಿ ಕ್ರಮಿಸುವಾಗ ನಂಬಿಕೆಯಿಂದ ಮುಂದುವರಿಯುತ್ತಾ ಸಾಯುವ ಗಳಿಗೆ ಹತ್ತಿರಸಿದಾಗ ನಮ್ಮ ಜೀವನದ ಎಲ್ಲಾ ಆಗುಹೋಗುಗಳ ಆಸಕ್ತಿಗಳನ್ನು ಪ್ರೀತಿಸ್ವರೂಪನಾದ ದೇವರಲ್ಲಿ ಒಪ್ಪಿಸಿಕೊಟ್ಟು ತನ್ನ ಮಗನನ್ನೆ ನಮಗಾಗಿ ಒಪ್ಪಿಸಿದ ತಂದೆಯ ಅಮೂಲ್ಯ ಪ್ರೀತಿಗೆ ಇದು ಪ್ರತ್ಯುತ್ತರವಾಗಿರುತ್ತದೆ.  ಇದು ಮಾತ್ರವಲ್ಲದೆ ನಮ್ಮ ಬಾಳಿನ ಸುಖ ದುಃಖಗಳಲ್ಲಿ ದೇವರ ಮುಂಜಾಗರೂಕತಾ ಕ್ರಮಗಳು ಹಾಗೂ ನಮಗಾಗಿ ಈ ಹಿಂದೆ ಮಾಡಿದ ಉತ್ಕøಷ್ಟ ಹಾಗೂ ಅಮೂಲ್ಯ ವಾಗ್ದಾನಗಳ ಆಶ್ರಯದಲ್ಲಿ ನಮಗೆ ಬಲ, ಧೈರ್ಯ ನೀಡುತ್ತದೆ-Z '99, 128 (ಖ 2473).

***    ***    ***

ಏಪ್ರಿಲ್ - 16

ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ. ನಾನು ಕಾರ್ಯಸಾಧಿಸುವ ದಿನದಲ್ಲಿ ಅವರು ನನಗೆ ಸ್ವಕೀಯ ಜನರಾಗಿರುವರು. ಒಬ್ಬನು ತನ್ನನ್ನು ಸೇವಿಸುವ ಸ್ವಂತ ಮಗನನ್ನು ಕರುಣಿಸುವಂತೆ ನಾನು ಅವರನ್ನು ಕರುಣಿಸುವೆನು. -ಮಲಾಕಿ 3:17

ದೇವರು ನಮ್ಮನ್ನು "ದೇವರಾದುಕೊಂಡ ಜನರನ್ನು ಹುಡುಕಿ ತನ್ನರಿ" ಎಂಬ ಕೆಲಸದ ಮೇಲೆ ನೇಮಿಸಿ ಕಳುಹಿಸಿದರೆ, ನಾವು ಆರಿಸಿಕೊಂಡ ಜನರಲ್ಲಿ ಕೆಲವರು ದೇವರಿಗೆ ಯೋಗ್ಯರಾಗಿರದೆ, ನಿರಾಕರಿಸಲ್ಪಡಬಹುದು. ಯಾಕಂದರೆ, ನಾವು ಹೃದಯ ನೋಡಿ ಅರಿತುಕೊಳ್ಳಲಾಗದ ಸ್ಥಿತಿಯಲ್ಲಿರುತ್ತೇವೆ. ಆದ್ದರಿಂದ, ಈ ವಿಷಯದಲ್ಲಿ ನಾವು ದೀನತೆಯಿಂದ, ಮಾನ್ಯತೆಯಿಂದ ಮತ್ತು ಸಾತ್ವಿಕದಿಂದ ಸಕಲರೊಂದಿಗೆ ವರ್ತಿಸುವದು ಅನಿವಾರ್ಯ ಹಾಗೂ ಕರ್ತನಲ್ಲಿ ಸ್ವಾಮಿನಿಷ್ಠೆಯಿಂದ ಇರತಕ್ಕದ್ದು ಅವಶ್ಯ. ದೇವರು ನಮ್ಮ ನಡೆಸುವಿಕೆಯ ಬಗ್ಗೆ ಗಮನಿಸಿ ಆತನ ಸೇವಕರಾಗಿರುವ ನಾವು ಈ ನಿಟ್ಟಿನಲ್ಲಿ ಶ್ರದ್ಧಾಪೂರ್ವಕ ಭಕ್ತಿ ವ್ಯಕ್ತಪಡಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕು. ಪ್ರವಾದಿಯಾದ ಸಮುವೇಲನು ಪೂರ್ವದಲ್ಲಿ ದಾವೀದನನ್ನು ಅಭಿಷೇಕಿಸುವಾಗ ದೇವರ ಮಾರ್ಗದರ್ಶನಕ್ಕಾಗಿ ಕಾತುರದಿಂದ ಎದುರು ನೋಡುತ್ತಿದ್ದನ್ನು ಇಲ್ಲಿ ನಾವು ಸ್ಮರಿಸಬಹುದು-Z '03, 223 (ಖ 3225).

*** *** ***

ಏಪ್ರಿಲ್ - 17

ಆತನು ಮಾಡಿದ ಅಭಿಷೇಕವು ಎಲ್ಲಾ ವಿಷಯಗಳಲ್ಲಿ ನಿಮಗೆ ಉಪದೇಶ ಮಾಡುವಂಥದ್ದಾಗಿದ್ದು ಸತ್ಯವಾಗಿದೆ, ಸುಳ್ಳಲ್ಲ. ಅದು ನಿಮಗೆ ಉಪದೇಶ ಮಾಡಿದ ಪ್ರಕಾರ ಆತನಲ್ಲಿ ನೆಲೆಗೊಂಡಿರ್ರಿ.
-1ಯೋಹಾನ 2:27

ದಾವೀದನನ್ನು ಅಭಿಷೇಕಿಸಿದ ನಂತರ ಕರ್ತನ ಶಕ್ತಿ ಮತ್ತು ಆಶೀರ್ವಾದಗಳು ನಮಗೆ ಗೊತ್ತಾಗದ ರೀತಿಯಲ್ಲಿ ಅವನಲ್ಲಿ ಸಹಕರಿಸಿದವು. ಇದರಿಂದ ದಾವೀದನಿಗೆ ಜ್ಞಾನ ವಿವೇಕಗಳು ಲಭಿಸಿ ಯಾವ ಕಾರ್ಯತತ್ಪರತೆಗೆ ನೇಮಿಸಲಾಯಿತೋ ಅದರ ಕಾರ್ಯ ಸಾಧನೆಗೆ ಸಿದ್ಧಪಡಿಸಲಾಯಿತು. ಕ್ರಿಸ್ತನ ಸಭೆ ಕರ್ತನೊಂದಿಗೆ ಒಂದಾದ ನಂತರ ಅಭಿಷೇಕ ಹೊಂದುವದರ ಮುಂಗುರುತು ಎಂದು ನಾವು ಪರಿಗಣಿಸಬಹುದೇ? ನಮ್ಮದು ವಾಸ್ತವಿಕವಾದ ಅಭಿಷೇಕವಲ.ಁಲ ಹಾಗೆ ಬರುವ ಆಶೀರ್ವಾದಗಳು ಲೌಕಿಕವಾದವುಗಳೂ ಅಲ್ಲ. ಯಾಕಂದರೆ, ನಾವು ನೂತನ ಸೃಷ್ಟಿಗಳಾಗಿ ಕೃಪೆ ಜ್ಞಾನ ಪ್ರೀತಿಗಳಲ್ಲಿ ಮಾತ್ರ ಅಭಿವೃದ್ಧಿ ಹೊಂದುತ್ತೇವೆ. ನಂತರ ಪ್ರಥಮ ಪುನರುತ್ಥಾನದಲ್ಲಿ ಸಿದ್ಧಿಗೆ ಬಂದು ನಮ್ಮ ಕರ್ತನು ಒಡೆಯನೂ ಆದ ಕ್ರಿಸ್ತನೊಂದಿಗೆ ಸಿಂಹಾಸನದ ಬಳಿಗೆ ಬರುತ್ತೇವೆ-Z '03, 223 (ಖ 3225).

*** *** ***

ಏಪ್ರಿಲ್ - 18

ಪ್ರಿಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸಬೇಡಿರಿ. ಆದರೆ ನೀವು ಎಷ್ಟರಮಟ್ಟಿಗೆ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾಗಿದ್ದೀರೋ ಅಷ್ಟರಮಟ್ಟಿಗೆ ಸಂತೋಷವುಳ್ಳವರಾಗಿರ್ರಿ; ಆತನ ಮಹಿಮೆಯ ಪ್ರತ್ಯಕ್ಷತೆಯಲ್ಲಿಯೂ ನೀವು ಸಂತೋಷಪಟ್ಟು ಉಲ್ಲಾಸಗೊಳ್ಳುವಿರಿ.

-1ಪೇತ್ರ 4:12,13

ಈ ದ್ವೇಷಪೂರಿತ ಲೋಕದಲ್ಲಿ, ನಾವು ನಮ್ಮ ಕರ್ತನ ಹೆಸರಿನಲ್ಲಿ ನಿಂದನೆ ಅಪವಾದಗಳ ಹೊರೆ ಹೊರಬೇಕಾಗುತ್ತದೆ. ಯಾಕಂದರೆ, ದಣಿಗಿಂತ ಆಳು ದೊಡ್ಡವನಲ್ಲ. ಈ ಪ್ರಪಂಚ, ಮಾಂಸಿಕ ಶರೀರ, ಸೈತಾನ ಇವರುಗಳು ನಮ್ಮ ದಾರಿಗೆ ಅಡ್ಡ ಬರುತ್ತಾರೆ. ನಮ್ಮ ಒಳಗೆ ಹೋರಾಟ, ಹೊರಗೆ ಭೀತಿ ಇರುವದು ಸಹಜ. ನೀತಿವಂತನಿಗೆ ಗುರಿಯಿಟ್ಟು ಬಾಣ, ಅಗ್ನಿ ಅಸ್ತ್ರಗಳ ಪ್ರಯೋಗ ಇರುವದು; ಇಂಥ ಕಠಿಣವಾದ ಶೋಧನೆಗಳು, ವೇದನೆಗಳು ಸಂಭವಿಸುವಲ್ಲಿ ನೀತಿವಂತರು ಸುಕ್ಷೇಮದಿಂದಿರುವದು ಹೇಗೆ ಸಾಧ್ಯ? ದೇವರ ಮುಂದೆ ಮೌನದಿಂದಿದ್ದು, ಆತನ ನಡೆಸುವಿಕೆಗಾಗಿ ಕಾದುಕೊಂಡಿದ್ದು, ಆತನ ಚಿತ್ತದ ಮೇರೆಗೆ ಬರುವ ದಾಳಿಗಳ ಹಿಮ್ಮೆಟ್ಟಿಸುವಿಕೆಗಾಗಿ ಕಾದುಕೊಂಡಿದ್ದು ಆತನ ಚಿತ್ತದ ಮೇರೆಗೆ, ಬರುವ ದಾಳಿಗಳನ್ನು ಹಿಮ್ಮೆಟ್ಟಿಸಲು ಕ್ರಿಯಾಪ್ರವರ್ತಕರಾಗಬೇಕಲ್ಲವೆ? ಕೀರ್ತನೆಗಾರನು ಹೇಳುವಂತೆ “ನಾನು ಮೌನವಾಗಿದ್ದೆನು, ಒಳ್ಳೆಯದನ್ನಾದರೂ ಆಡದೆ ಸುಮ್ಮನಿದ್ದೆನು” . ಅಂದರೆ, ನನ್ನ ಸ್ವಂತ ದೃಷ್ಟಿಯಲ್ಲಿ ಒಳ್ಳೆಯದಾಗಿದ್ದರೂ ಹೇಳದೆ, ಮಾಡದೆ ಸ್ಥಗಿತನಾಗಿದ್ದೆನು-Z ’96, 31 (ಖ 1937).

*** *** ***

ಏಪ್ರಿಲ್ - 19

ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ. ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. -ಮತ್ತಾಯ 12:34,35

ನಾವು ಮೊಟ್ಟಮೊದಲಾಗಿ ಹೃದಯದ ಬಗ್ಗೆ ಹೆಚ್ಚು ಎಚ್ಚರವಹಿಸಬೇಕು. ಯಾಕಂದರೆ, ನಮ್ಮ ಪ್ರೀತಿ, ವಾತ್ಸಲ್ಯ, ಮನೋಭಾವನೆ, ದೈವ ಕೃಪೆಗೆ ಪೂರ್ಣ ಅಧೀನದಲ್ಲಿರುವಂತೆ ನೋಡಿಕೊಳ್ಳಬೇಕು. ಇದಲ್ಲದೆ, ಪ್ರತಿಯೊಂದು ಸತ್ಯತೆ ನೀತಿಗಳು ಅದರಲ್ಲಿ ಆಸನಾರೂಢವಾಗಿರಬೇಕು. ನ್ಯಾಯ, ದಯೆ, ಪರೋಪಕಾರ, ಸಹೋದರ ಭ್ರಾತೃತ್ವ, ಪ್ರೀತಿ, ನಂಬಿಕೆ, ಸಾತ್ವಿಕತ್ವ, ಮಿತಾಚಾರ, ದೇವರಲ್ಲಿ ಕ್ರಿಸ್ತನಲ್ಲಿ ಇಟ್ಟಿರುವ ಅನನ್ಯ ಭಕ್ತಿ, ಪವಿತ್ರತೆಯ ಸೌಂದರ್ಯದ ಬಗ್ಗೆ ಇರುವ ಉತ್ಸಾಹವುಳ್ಳ ಪ್ರೀತಿ ಇವು ನಮ್ಮ ಜೀವನದ ಅಧಿಕಾರರೂಢ ತತ್ವಗಳಿಗೆ ಎಂದೂ ಕದಲದಂತೆ ನೆಲೆಗೊಂಡಿರಬೇಕು. ಈ ಉದಾರ ತತ್ವಗಳು ನಮ್ಮ ಮನಸ್ಸಿನಲ್ಲಿ ಬೇರೂರಿ ನೆಲೆಗೊಂಡಿದ್ದರೆ ಮಾತ್ರ ನಮ್ಮ ಹೃದಯದ ಒಳ್ಳೆ ಬೊಕ್ಕಸಗಳಿಂದ, ಸತ್ಯ, ಶಾಂತಚಿತ್ತ, ಜ್ಞಾನ, ದಯೆ ತುಂಬಿದ ನುಡಿಗಳು ಹೊರಟು ಬರುತ್ತವೆ-Z ’96, 30 (ಖ 1937).

*** *** ***

ಏಪ್ರಿಲ್ - 20

ಸ್ವಲ್ಪವಾದದರಲ್ಲಿ ನಂಬಿಗಸ್ತನಾದವನು ಬಹಳವಾದದರಲ್ಲಿಯೂ ನಂಬಿಗಸ್ತನಾಗುವನು.

-ಲೂಕ 16:10

ದೇವಜನರು ತಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಅಂದರೆ, ಅದು ಮನೆಯಲ್ಲಿಯೇ ಆಗಲಿ ಅಥವಾ ಅಂಗಡಿಯಲ್ಲಾಗಲೀ ತೃಪ್ತಿಪಟ್ಟುಕೊಂಡು ದೇವರು ತಮ್ಮ ಶ್ರಮೆಯ ಫಲವನ್ನು ನೇರವಾಗಿ ಸ್ವೀಕರಿಸಿರುತ್ತಾನೆ ಎಂದು ತಮ್ಮಲ್ಲಿ ಸಮಾಧಾನ ಹೊಂದುವ ಹಾಗಿಲ್ಲ. ಆದರೆ, ಪ್ರತಿಯೊಬ್ಬನು ತನ್ನ ದಿನನಿತ್ಯದ ವಹಿವಾಟುಗಳ ವಿಲೇವಾರಿಯಲ್ಲಿ ಅದು ಲೌಕಿಕವಾದದ್ದಾಗಿದ್ದಲ್ಲಿ ಹಾಗೂ ಜವಾಬ್ದಾರಿಯುತದಲ್ಲಾಗಲಿ ಪ್ರತಿಯೊಂದನ್ನು ಎಚ್ಚರದಿಂದ ಅವಲೋಕಿಸಿ ನ್ಯಾಯಬದ್ಧವಾದ ರೀತಿಯಲ್ಲಿ ಲೌಕಿಕ ಕಾರ್ಯಗಳ ಸೇವೆಯಲ್ಲಿ ಸಂದುಹೋಗುವ ಕಾಲಗಳಿಗೆ ಕಡಿತಕೊಟ್ಟು ಆಧ್ಯಾತ್ಮಿಕ ವಿಷಯಗಳಿಗೆ ಆಸಕ್ತಿಗಳಿಗೆ ತ್ಯಾಗ ಮಾಡಿ ತನ್ನ ಹಾಗೂ ಇತರರ ಆತ್ಮೀಕ ವಿಚಾರಗಳಿಗೆ ವ್ಯಯಮಾಡುವಂತೆ ನೋಡಿಕೊಳ್ಳಬೇಕಾಗುತ್ತದೆ. ಹೀಗೆ ನಡೆದುಕೊಳ್ಳುವಲ್ಲಿ ದೇವರಿಗೆ ಪ್ರತಿಷ್ಠಿತನಾದವನು ಸ್ವಯಂ ನಿರಾಕರಿಸುವ ಶಿಷ್ಯನೂ ಹಾರಿಹೋಗುವ ಸಮಯವನ್ನು ವ್ಯರ್ಥವಾಗಿ ಕಳೆಯದೆ ತಂದೆಯ ವ್ಯವಹಾರಗಳಲ್ಲಿ ತಲ್ಲೀನನಾಗಿರುವಂತಾಗಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ-Z '03, 407 (ಖ 3265).

*** *** ***

ಏಪ್ರಿಲ್ - 21

ಯಾಕಂದರೆ, ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ. ಆದುದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ. -ಇಬ್ರಿಯ 4:15,16

ಶೋಧನೆಯ ಕ್ಷಣದಲ್ಲಿ, ಹೃದಯದ ಭಾವನೆಗಳು ಕುಂದಿಹೋಗದೆ, ದೇವರ ಸನ್ನಿಧಿಗೆ ಸೇರುವದಕ್ಕೆ ಮೇಲೆ ಮೇಲೆ ಏರುವಂತಾಗಬೇಕು ಹಾಗೆ ಉಚ್ಚಮಟ್ಟ ತಲುಪಲು ಪೂರ್ಣ ನಂಬಿಕೆಯೇ ಆಧಾರ. ಇದರಲ್ಲಿ ದೇವರ ಪ್ರೀತಿ, ಜ್ಞಾನ, ಸಮಯೋಜಿತ ಸಹಾಯ ದೊರೆಯುವಂತೆ ಯಾರಾರು ದೇವರಲ್ಲಿ ಹೆಚ್ಚಿನ ಪ್ರೀತಿ ತೋರಿಸುತ್ತಾರೋ, ಅವರಿಗೆ ದೇವರಿಂದ ಹಿತ ಸಂಯೋಜನೆ ಇವುಗಳ ಮಾನ್ಯತೆ ಮಾಡುವವರಂತೆ ಆಗಬೇಕು. ಇಂಥಹ ಸಂದಿಗ್ಧ ಪರಿಸ್ಥಿತಿಗಳಲ್ಲಿ ಸಹಾಯಕ್ಕಾಗಿ ಯಾಚಿಸುವಾಗ ನಮ್ಮನ್ನು ದೇವರ ಬಳಿಗೆ ಸೆಳೆದು, ಆತನ ಆಲೋಚನೆ ಸಹಾಯ ನೀತಿಗಾಗಿ ಬಲ, ಸತ್ಯ, ಶುದ್ಧತೆ ಮತ್ತು ಪ್ರೀತಿ ಇವುಗಳು ನಮ್ಮ ಸನಿಹಕ್ಕೆ ಬಂದು ಶೋಧನೆಗಳ ಮೇಲೆ ಜಯಭೇರಿ ಕ್ಷಣ ಕ್ಷಣದಲ್ಲೂ, ದಿನ ನಿತ್ಯದಲ್ಲೂ ಮತ್ತು ಅಂತಿಮವಾಗಿ ವಿಜಯೋತ್ಸಾಹಗಳಲ್ಲಿ ಲೀನಗೊಳ್ಳುತ್ತವೆ-Z '98, 23 (ಖ 2248).

*** *** ***

ಏಪ್ರಿಲ್ - 22

ಇದಲ್ಲದೆ ನಾನು ನಿಮಗೆ ಹೇಳುವದೇನಂದರೆ, ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕು.

-ಮತ್ತಾಯ 12:36

ನಮ್ಮ ದಿನನಿತ್ಯದ ವ್ಯವಹಾರಗಳಲ್ಲಿ ಸಿಲುಕಿರುವಾಗ ನಮ್ಮ ನಡವಳಿಕೆ ಬಗ್ಗೆ ಸೂಕ್ಷ್ಮವಾಗಿ ಗಮನಿಸುವಲ್ಲಿ (ಇದು ಪ್ರತಿ ಕ್ರೈಸ್ತನ ಕರ್ತವ್ಯ) ನಾವು ಆಡುವ ಮಾತುಗಳು ಕರ್ತನ ಗೌರವಕ್ಕೆ ಚ್ಯುತಿ ತರುವಂಥದಾಗಿ ಕಂಡುಬಂದರೆ ಕೂಡಲೆ ನಾವು ನಮ್ಮ ಸಹಾಯಕನಾದ ಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥನೆಯ ಮೂಲಕ ದೇವರನ್ನು ಸಮೀಪಿಸಿ ನಮ್ಮ ದೋಷಗಳ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಿ ದೇವರ ಹೆಸರು ಮತ್ತು ಧ್ಯೇಯಗಳಿಗೆ ಘನ ಸಲ್ಲಿಸುವದರಲ್ಲಿ ವಿಫಲರಾದುದರ ಬಗ್ಗೆ ವಿಶಾದ ತೋರಿಸಿ ಕರ್ತನಿಗೆ ಅಗೌರವಕ್ಕೆ ಕಾರಣವಾದದ್ದರಿಂದ ಈ ಪಾಪವನ್ನು ನಮ್ಮ ಮೇಲೆ ಹೊರಿಸದೆ ಅದನ್ನು ಪೂರ್ಣವಾಗಿ ಅಳಿಸಿ ಹಾಕುವಂತೆ ಪ್ರಾರ್ಥಿಸಿ ಕ್ರಿಸ್ತನಲ್ಲಿರುವ ಪುಣ್ಯದ ನಿಮಿತ್ತ ನಮ್ಮನ್ನು ಶುದ್ಧೀಕರಿಸಿ ನಮ್ಮ ನಿರೀಕ್ಷೆ, ಭರವಸೆಗಳಿಗೆ ಕ್ರಿಸ್ತನ ಅಮೂಲ್ಯ ರಕ್ತವೇ ಆಧಾರ ಎಂದೆಣಿಸಬೇಕು. ಆದ್ದರಿಂದ ನಾವು ಸುಮ್ಮನೆ ಆಡುವ ಪ್ರತಿ ಮಾತಿನ ಲೆಕ್ಕ ಸಲ್ಲಿಸಬೇಕು. ಹೀಗೆ ನಮ್ಮ ಮಾತುಗಳ ಬಗ್ಗೆ ಮಾನಸಾಂತರ ವ್ಯಕ್ತಪಡಿಸಿ ಅದನ್ನು ನಂಬಿಕೆಯಿಂದ ಕ್ರಿಸ್ತನ ಪುಣ್ಯದ ನೆರಳಿನಲ್ಲಿ ಕೋರಿಕೊಂಡರೆ ನಾವು ಈ ಎಲ್ಲಾ ದೋಷಗಳಿಂದ ಮುಕ್ತರಾಗುತ್ತೇವೆ-Z '96, 32 (ಖ 1937).

*** *** ***

ಏಪ್ರಿಲ್ - 23

ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲಕೊಡುತ್ತಾರೆ. ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು.

-ಲೂಕನು 8:15

ದೇವರಿಗೆ ತನ್ನನ್ನೇ ಬಲಿತ್ಯಾಗವಾಗಿ ಮಾಡಿಕೊಂಡಿರುವ ಪ್ರತಿಯೊಬ್ಬನು ತಾನು ಸಾಧು ಸ್ವಭಾವ, ದೈನ್ಯತೆ, ಕಲಿಯುವಂಥ ಗುಣಗಳನ್ನು ಅಗತ್ಯವಾಗಿ ಹೊಂದಿಕೊಂಡಿರಬೇಕು. ಇಲ್ಲವಾದಲ್ಲಿ ದಾರಿ ಬಿಟ್ಟು ಹೋಗಿರುತ್ತಾನೆ. ಅವನು ತಾಳ್ಮೆಯೆಂಬ ಸಹನಾಗುಣವನ್ನು ತನ್ನಲ್ಲಿ ವೃದ್ಧಿಗೊಳಿಸಬೇಕು. ಯಾಕಂದರೆ, ನಮ್ಮನ್ನು ನಾವು ನಿರಾಕರಿಸಿಕೊಳ್ಳಬೇಕಾದ ಸಮಯ ಬಂದಾಗ ಕೆಲವು ಸಾರಿ ಅನ್ಯಾಯಕ್ಕೆ ಗುರಿಯಾಗಬಹುದು ಅಂಥ ಸಂದರ್ಭದಲ್ಲಿ ದೇವರಿಗಾಗಲಿ ಆತನ ಜನರಿಗಾಗಲಿ ನೋವಾಗದಂತೆ ತಾಳ್ಮೆಯಿಂದ ನಮ್ಮನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಇಷ್ಟೇ ಅಲ್ಲದೆ, ಸಹೋದರ ಅನ್ಯೋನ್ಯತೆಯ ಭಾವವನ್ನೆ ಅಭ್ಯಾಸಿಸಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ದೇವರ ಪೂರ್ಣಚಿತ್ತ ಅಂದರೆ, ಪ್ರೀತಿಯನ್ನು

ವ್ಯಾಪಕವಾಗಿ ಗೆಲುವಿನ ಅಳತೆಯಲ್ಲಿ ಸಾಧಿಸಿಕೊಂಡರೆ ಮಾತ್ರ ನಮ್ಮ ಯಜ್ಞಾರ್ಪಣೆಯನ್ನು ಪೂರ್ಣಗೊಳಿಸುವಂಥ ಕಾರ್ಯ ಆಗುತ್ತದೆ-Z '03, 408 (ಖ 3265).

*** *** ***

ಏಪ್ರಿಲ್ - 24

ನಮ್ಮಲ್ಲಿ ಪ್ರತಿಯೊಬ್ಬನು ತನ್ನ ನೆರೆಯವನ ಹಿತವನ್ನೂ, ಭಕ್ತಿವೃದ್ಧಿಯನ್ನೂ ಅಪೇಕ್ಷಿಸುವವನಾಗಿ ಅವನ ಸುಖವನ್ನು ನೋಡಿಕೊಳ್ಳಲಿ. -ರೋಮಾಪುರ 15:2

ಕರ್ತನ ಶಿಷ್ಯರಲ್ಲಿ ಪ್ರತಿಯೋರ್ವನಿಗೂ ಕಲಿಸಿಕೊಡುತ್ತಿರುವ ಪಾಠವೇನೆಂದರೆ, ಈಗಿನ ಕಾಲದ ಅವನ ಕಾರ್ಯವ್ಯಾಪ್ತಿ ವೃತ್ತಿ ಕರೆಯುವಿಕೆ ಇವುಗಳ ಮೂಲೋದ್ದೇಶ ತನ್ನಲ್ಲಿರುವ ಸಮಸ್ತವನ್ನು ತ್ಯಾಗ ಮಾಡುವದೇ. ಈ ಸೇವಾಕ್ರಮದ ಸ್ವರೂಪವು ಕರ್ತನ ಶಿಷ್ಯರ ಗಮನಕ್ಕೆ ಬಾರದಿರುವದು ಏನಂದರೆ, ಇತರರ ಹಿತರಕ್ಷಣೆಗಾಗಿ ನಮ್ಮ ಮಾರ್ಗಗಳ ಅಥವಾ ಯೋಜನೆಗಳ, ನಮ್ಮ ಕ್ರಮಬದ್ಧತೆ ಅಥವಾ ಆಯ್ಕೆಗಳ ವರ್ಜಿಸುವ ಅವಕಾಶಗಳೇ ಹಾಗೂ ಸಮಾಧಾನಕ್ಕಾಗಿ ಇತರರ ಯೋಜನೆ ಮತ್ತು ಆಯ್ಕೆಗಳ ಅಂಗೀಕರಿಸುವಿಕೆಯೂ ಆಗಿರಬಹುದು. ಈ ರೀತಿ ಮಾಡುವಂಥಹದು ನಮ್ಮ ವೈಯಕ್ತಿಕ ಆಯ್ಕೆಯೇ ಇರಬಹುದು ಮತ್ತು ಈ ಸಂದರ್ಭದಲ್ಲಿ ಕರ್ತನಿಗೆ ಈ ವಿಷಯವು ಒಪ್ಪಿಗೆಯಾಗಿ ಇರುವದೇ ಅಥವಾ ಇನ್ನೊಂದು ಕ್ರಮವನ್ನು ಅನುಸರಿಸುವ ಸಾಧ್ಯತೆಗಳು ಇದ್ದರು ಇರಬಹುದು. ಒಟ್ಟಿನಲ್ಲಿ ಹೇಳುವದಾದರೆ ಇತರರ ಇಷ್ಟಗಳ ಮೇರೆಗೆ ಸಮಾಧಾನ ಹಾರೈಸುವಿಕೆಗಾಗಿ ನಮ್ಮ ಆಯ್ಕೆ ಒಲವುಗಳನ್ನು ವಿಸರ್ಜಿಸಬೇಕಾಗುತ್ತದೆ. ಒಂದು ವೇಳೆ ಈ ಕ್ರಮದಿಂದ ಒಳ್ಳೇದರ ಲಾಭ ಪಡೆಯುವಂತಾದರೆ ಹಾಗೆ ಮಾಡಬಹುದು-Z '14, 308, 309 (ಖ 5555).

*** *** ***

ಏಪ್ರಿಲ್ - 25

ಆದರೆ, ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ. -ಇಬ್ರಿಯರಿಗೆ 11:6

ನಿನ್ನ ನಂಬಿಕೆಯಂತೆಯೇ ನಿನಗಾಗಲಿ ಎಂಬದು ದೇವರು ತನ್ನ ಶಿಷ್ಯರಿಗೆ ಹೇಳಿದ ಕಿವಿ ಮಾತು ಆಗಿದೆ. ಮೊದಲಿಂದ ಕಡೆಯತನಕ ಯಾರಾರು ಕ್ರೈಸ್ತೀಯ ಜೀವತದಲ್ಲಿ ಬಾಳ್ವಿಕೆ ಮಾಡಿರುತ್ತಾರೋ, ಅಂಥಹವರೊಂದಿಗೆ ದೇವರು ವ್ಯವಹರಿಸುವಲ್ಲಿ ಈ ಹೇಳಿಕೆ ಆದ್ಯಂತವಾಗಿದೆ. ಇಲ್ಲಿ ನಂಬಿಕೆಯು ವಿವಿಧ ಕಾರ್ಯಫಲಗಳಲ್ಲಿ ಗೋಚರಿಸುತ್ತದೆ. ದೇವರು ನಮ್ಮ ಕಡೆ ಗಮನ ಕೊಡದಿರುವಾಗ, ಆತ್ಮಿಕ ಹಾಗೂ ಭೌತಿಕ ಜೀವಿತದಲ್ಲಿ ಸಮೃದ್ಧಿ ಅಥವಾ ಕೊರತೆ ಇರುವಾಗ, ಪ್ರಪಂಚದ ಎಲ್ಲಾ ಶಕ್ತಿಗಳು ನಮಗೆ ವಿರುದ್ಧವಾಗಿ ಎದ್ದು ನಿಂತಾಗ, ನಮ್ಮ ನಂಬಿಕೆ ಅಚಲವಾಗಿರಬೇಕು. ಲೋಕವನ್ನು ಜಯಿಸುವಂಥಾದ್ದು ನಮ್ಮ ನಂಬಿಕೆಯೇ ಹೌದು. ಇದರಲ್ಲಿ ನಮಗೆ ದೇವರ ಮೇಲೆ ಅಪಾರ ವಿಶ್ವಾಸ, ಭರವಸೆ ಮುಖ್ಯವಾಗಿ ಆತನ

ಒಳ್ಳೇತನ, ನಂಬಿಗಸ್ತತೆಯ ಮೇಲೆ ಅವಲಂಬಿಸಿದ್ದು ಆತನ ವಾಗ್ದಾನದ ಮೇರೆಗೆ ಸಕಲವೂ ನಮ್ಮ ಹಿತಕ್ಕೆ ಕೆಲಸ ಸಾಧಿಸಿ, ನಾವು ದೇವ ಜನರು ಎಂಬದನ್ನು ದೃಢಪಡಿಸಿದಂತೆ ಆಗುತ್ತದೆ-Z '00, 139 (ಖ 2625).

*** *** ***

ಏಪ್ರಿಲ್ - 26

ಹೇಗೆಂದರೆ, ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ, ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ.
-ಇಬ್ರಿಯ 4:10

ವಾರದ ಏಳು ದಿವಸಗಳಲ್ಲಿ ಒಂದು ದಿವಸವನ್ನು ಮಾತ್ರ ಕೇಂದ್ರೀಕರಿಸಲಾಗಿದ್ದರೂ, ಪ್ರೀತಿಯೆಂಬ ಧರ್ಮ ಪ್ರಮಾಣವು ನಮ್ಮ ಆಯುಷ್ಕಾಲವನ್ನು ನಿಯಂತ್ರಿಸಿ ಕ್ರಮಪಡಿಸುತ್ತದೆ. ವಾರದ ಏಳು ದಿವಸಗಳ ಪೂರ್ತಿ ನಾವು ದೇವರನ್ನು ಪೂರ್ಣ ಹೃದಯ, ಮನಸ್ಸು, ಪ್ರಾಣ, ಶಕ್ತಿಗಳಿಂದ ಪ್ರೀತಿಸಬೇಕು. ಹಾಗೆ ಈ ಎಲ್ಲಾ ದಿವಸಗಳಲ್ಲಿ ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸಬೇಕು ಮತ್ತು ಏಳು ದಿವಸಗಳಲ್ಲಿ ನಮ್ಮ ಕೆಲಸಗಳಿಂದ ವಿಶ್ರಾಂತಿ ಪಡೆಯಬೇಕು. ಯೇಸು ಕ್ರಿಸ್ತನ ಪೂರ್ಣ ಕೆಲಸದಲ್ಲಿ ನಂಬಿಕೆಯಿಟ್ಟು ವಿಶ್ರಾಂತಿ ಹೊಂದಬೇಕು. ಕಡೇದಾಗಿ ಎಲ್ಲಾ ಗ್ರಹಿಕೆಗೂ ಮೀರುವ ದೇವರ ಶಾಂತಿಯಲ್ಲಿ, ಪ್ರೀತಿಯಲ್ಲಿ ನೆಲೆಗೊಂಡು ಹೃದಯದಲ್ಲಿ ಬೇರೂರುವಂತೆ ವಿಶ್ರಾಂತಿ ಪಡೆಯಬೇಕು-Z '02, 205 (ಖ 3037).

*** *** ***

ಏಪ್ರಿಲ್ - 27

ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ. -ಫಿಲಿಪ್ಪಿಯವರಿಗೆ 2:5

ಕ್ರಿಸ್ತನ ಮನಸ್ಸು ನಮ್ಮಲ್ಲಿ ಇರಬೇಕಾದರೆ, ಶಾಸ್ತ್ರಕ್ಕೆ ಅನುಗುಣವಾದ ಹೋರಾಟ ಮಾಡಬೇಕು ಅಂದರೆ, ದೇವರ ಮಹಾನ್ ಯುಗಾಂತರಗಳ ಯೋಜನೆಯಲ್ಲಿ ವ್ಯಕ್ತವಾಗಿರುವ ಆತನ ಉದ್ದೇಶಗಳಿಗೆ ದೈನ್ಯತೆ ನಂಬಿಕೆಯಿಂದ ಶರಣಾಗತವಾಗುವ ಮನಸ್ಸಿರಬೇಕು. ಹಾಗೆಯೇ, ದೇವರ ಚಿತ್ತ ಕೈಕೊಳ್ಳುವ ಸ್ವಯಂಬಲ ಇರುವದು ಸಹ ಮುಖ್ಯ. ದೇವರ ಸಕಲ ಇಷ್ಟಾರ್ಥಗಳ ನೆರವೇರಿಕೆಯನ್ನು ಸಹ ನಮ್ಮ ದೃಷ್ಟಿಯಲ್ಲಿಟ್ಟಿರಬೇಕು. ಹೀಗೆ ಕ್ರಿಸ್ತನಲ್ಲಿದ್ದಂತ ಮನಸ್ಸು ನಮ್ಮನ್ನು ಆವರಿಸಿಕೊಂಡಿದ್ದರೆ, ಆತನ ಹಾಗೆ ನಾವೂ ಸಹ ಲೌಕಿಕ ವ್ಯವಹಾರಗಳಲ್ಲಿ ಸಿಲುಕದೆ ಮುಕ್ತರಾಗುವ ಇಚ್ಛೆ ಹೊಂದಿಕೊಂಡು ಕರ್ತನ ಸೇವೆಯಲ್ಲಿ ನಿರತರಾಗುವ ಕಾಲಾವಕಾಶ ಪಡೆದುಕೊಂಡು ಅದೇ ಸೇವೆಯಲ್ಲಿ ಶಕ್ತಿ, ಬುದ್ಧಿ, ಪ್ರಯತ್ನಶೀಲತೆ ಪ್ರಯೋಗಿಸಿ ಧನ್ಯರಾಗುತ್ತೇವೆ-Z '02, 265 (ಖ 3069)

*** *** ***

ಏಪ್ರಿಲ್ - 28

ಇದು ಮಾತ್ರವಲ್ಲದೆ, ನಮಗೆ ಉಂಟಾಗುವ ಉಪದ್ರುವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕಂದರೆ ಉಪದ್ರುವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವ ಸಿದ್ಧಿ ಹುಟ್ಟುತ್ತದೆ, ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು. ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡಿಸುವದಿಲ್ಲ; ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ.

-ರೋಮಾಪುರ 5:3-5

ನಮಗೆ ತಾಳ್ಮೆಯ ಅಗತ್ಯವಿರುತ್ತದೆ. ಆದರೆ, ಅದನ್ನು ಶೋಧನೆಗಳ ಅನುಭವದಿಂದ ಮಾತ್ರ ಪಡೆಯಲು ಸಾಧ್ಯ. ನಮಗೆ ನಂಬಿಕೆಯ ಅಗತ್ಯವಿರುತ್ತದೆ. ಹಾಗೆ ಅದನ್ನು ಅವಶ್ಯಕತೆಗಳಿಂದ ವೃದ್ದಿಗೊಳಿಸಲು ಸಾಧ್ಯ. ಹಾಗೆ ನಮ್ಮ ಭವಿಷ್ಯದ ಕೆಲಸ ಕಾರ್ಯಗಳ ಅನುಭವದ ಅಗತ್ಯವಿರುತ್ತದೆ. ಆದನ್ನು ಪಡೆಯಬೇಕಾದರೆ ನಾವು ದೇವರ ರಾಜ್ಯದಲ್ಲಿ ಸೇವಕರು, ಪ್ರತಿನಿಧಿಗಳಾಗಿ ಆಯ್ಕೆ ಆಗಿದ್ದು, ಇತರರ ಕಷ್ಟ ಸಂಕಟ ವೇದನೆ ಶೋಧನೆಗಳ ಬಗ್ಗೆ ನಾವು ಅನುಕಂಪ ತೋರಿಸುವಲ್ಲಿ ಮಾತ್ರ ಅದನ್ನು ಪಡೆಯಬಹುದು. ಈಗಿನ ಕಾಲದ ಅನುಭವಗಳಿಂದ ಕಲಿಯತಕ್ಕ ಪಾಠ ಯಾವದೆಂದರೆ ಕೆಟ್ಟದ್ದನ್ನು ಎದುರಿಸಬೇಕು. ಆದರೆ ಆದನ್ನು ಒಳ್ಳೇದರಿಂದ ಎದುರಿಸಬೇಕೇ ಹೊರತು, ಕೆಟ್ಟದ್ದರಿಂದ ಅಲ್ಲ-Z ’03, 348 (ಖ 3228).

*** *** ***

ಏಪ್ರಿಲ್ - 29

ಅವನು ನನಗೆ ಮೊರೆ ಇಡುವಾಗ ಸದುತ್ತರವನ್ನು ದಯಪಾಲಿಸುವೆನು. ಇಕ್ಕಟ್ಟಿನಲ್ಲಿ ಹತ್ತಿರವಿದ್ದು, ಅವನನ್ನು ತಪ್ಪಿಸಿ ಘನಪಡಿಸುವೆನು. -ಕೀರ್ತನೆ 91:15

ಕರ್ತನ ಬಳಿಗೆ ನಮ್ಮ ದುಃಖ ತಾಪಗಳನ್ನು ಕೊಂಡೊಯ್ಯುವದು ನಿಜವಾಗಿ ಒಂದು ಘನ ಸವಲತ್ತು.

ಯಾಕಂದರೆ ದೇವರಿಗೆ ಗೊತ್ತು

ಜೀವನದ ಅಳಲುಗಳ ಕಹಿಗಳನ್ನು ಹೇಗೆ ನಿವಾರಿಸಬೇಕು ಎಂದು.

ಮೊದಲದಾಗಿ ಲೌಕಿಕ ವಸ್ತುಗಳು ವ್ಯರ್ಥವಾದವು ಅವುಗಳಿಂದ ನಮ್ಮ ಆತ್ಮಗಳ ಆಕಾಂಕ್ಷೆಗಳನ್ನು ತೃಪ್ತಿಪಡಿಸಲಾಗದು ಮತ್ತು ನೊಂದ ಹೃದಯಕ್ಕೆ ಸಾಂತ್ವನ ನೀಡದು ಎಂಬದನ್ನು ದೇವರು ಅನುಭವಗಳಿಂದ ನಮಗೆ ವ್ಯಕ್ತಪಡಿಸುತ್ತಾನೆ. ನಮ್ಮ ಅನುಭವಗಳ ಶೋಕ ಎಷ್ಟೇ ಇದ್ದರೂ ಅವೆಲ್ಲ ಬೇಗ ಮಾಸಿಹೋಗುವವು ಎಂಬ ಆಲೋಚನೆ ನಮ್ಮಲ್ಲಿ ಹುಟ್ಟುತ್ತವೆ. ಹಾಗೆ ಮಾಡಿದಲ್ಲಿ, ನಮ್ಮಲ್ಲಿ ಸಮಾಧಾನದ ನೀತಿಫಲಗಳು ಪಕ್ವವಾಗಿ, ಬಲಯುತವಾದ ಗೌರವವುಳ್ಳ ನಡತೆ ನಮ್ಮಲ್ಲಿ ವೃದ್ದಿಗೊಳ್ಳುತ್ತದೆ.

ಇವೆಲ್ಲಾ ಸ್ವಯಂ ನಿರ್ಬಂಧ, ಆಲೋಚನಾ ಪರಾಮರ್ಷೆ, ಬಾಧೆಗಳಲ್ಲಿ ತಾಳ್ಮೆ, ಸಹನೆ ಪ್ರೀತಿಪೂರ್ವಕವಾದ ವಿಧೇಯತೆ ಮತ್ತು ದೇವರಲ್ಲಿ ನಂಬಿಕೆ ಭರವಸೆಗಳಿಂದ ಮಾತ್ರ ಸಾಧ್ಯವಾಗುತ್ತದೆ-Z '96, 31 (ಖ 1937).

*** *** ***

ಏಪ್ರಿಲ್ - 30

ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜ ವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.

-1ಪೇತ್ರ 2:9

ನಮ್ಮನ್ನು ಈ ಬೆಳಕಿಗೆ ಕರೆದಂಥ ಮುಖ್ಯ ಉದ್ದೇಶವೇನಂದರೆ, ನಾವು ಅದು ಹೊಳೆಯುವಂತೆ ಮಾಡುವದೇ. ನಾವು ಆ ಬೆಳಕು ಹೊಳೆಯುವಂತೆ ಮಾಡದಿದ್ದರೆ, ಅದನ್ನು ಹೊಂದುವ ಯೋಗ್ಯತೆ ನಮಗಿರುವದಿಲ್ಲ ಮತ್ತು ಆ ಅಮೂಲ್ಯ ನಿಧಿಯು ನಮ್ಮಿಂದ ತೆಗೆಯಲ್ಪಟ್ಟು ನಮ್ಮನ್ನು ಕತ್ತಲೆಗೆ ತಳ್ಳಲಾಗುವದು. ನಾವು ನಿಜವಾಗಿಯೂ ಆ ಬೆಳಕಿನಿಂದ ನಮ್ಮನ್ನೇ ದೇವರಿಗೆ ಪೂರ್ಣವಾಗಿ ಪ್ರತಿಷ್ಠಿಸಿಕೊಂಡಿದ್ದರೆ, ನಮ್ಮನ್ನೇ ಹೀಗೆ ಪ್ರಶ್ನಿಸಿಕೊಳ್ಳೋಣ; ದೇವರು ನಮ್ಮನ್ನು ಕತ್ತಲೆಯೊಳಗಿಂದ ಕರೆದದ್ದಕ್ಕೆ ಯಾವ ರೀತಿಯಿಂದ ದೇವರಿಗೆ ಸ್ತುತಿ ಸ್ತೋತ್ರ ಸಲ್ಲಿಸುವದು? ನಾನು ಈ ಶುಭ ಸಮಾಚಾರವನ್ನು ಹತ್ತಿರದಲ್ಲಿರುವ, ದೂರದಲ್ಲಿರುವ ನೆರೆಯವರಿಗೆ ಹೇಗೆ ಪ್ರಚಾರ ಮಾಡುತ್ತಿದ್ದೇನೆ? ನಾನು ನಿಜವಾಗಿ ನನ್ನ ಬಗ್ಗೆ ಹೀಗೆ ದೃಢೀಕರಿಸಬಲ್ಲೆನೆ?

ಸಮಸ್ತವೂ ಯೇಸುವಿಗಾಗಿ ಸಮಸ್ತವೂ ಯೇಸುವಿಗಾಗಿ

ನನ್ನ ಸರ್ವಸ್ವವೂ ಈಡು ವಿಮೋಚನೆಯ ಕಾರ್ಯಶಕ್ತಿಗಾಗಿ

ನನ್ನ ಎಲ್ಲಾ ಯೋಚನೆಗಳು, ಮಾತುಗಳು ಕಾರ್ಯವೈಖರಿಗಳು

ನನ್ನ ಸರ್ವ ದಿನಗಳೂ ಮತ್ತು ನನ್ನ ಪ್ರತಿ ಗಳಿಗೆಯೂ-Z '03, 165 (ಖ 3199).

*** *** ***